




ಗೋಪ್ಯವಾಗಿ ಮಾಡಲಾಗುತ್ತದಂತೆ. ದರವನ್ನು ಅಂತಿಮಗೊಳಿಸುವ ಸಮಿತಿಯಲ್ಲಿ, ನಾಗರಾಜುವನ್ನೂ ಸೇರಿಸಿ, ಒಟ್ಟು ನಾಲ್ಕು ಜನರಿರುವುದಂತೆ. ಪಾಲುದಾರರಾದ ಮನು ಮುತ್ತಪ್ಪ, ಮಾರ್ಕಂಡ ಪ್ರವೀಣ ಹಾಗೂ ಮುಖ್ಯ ಎಂಜಿನಿಯರ್, ಪ್ರೊಡಕ್ಷನ್ ವಿಭಾಗದ ಮುಖ್ಯಸ್ಥನಾದ ಸುತನ್ ಸುಬ್ಬಯ್ಯ. ಆ ವಿಭಾಗದಲ್ಲಿ ಗುಮಾಸ್ತೆಯಾಗಿ ಮಿಥಿಲಾ ಅನ್ನುವವಳೂ ಇದ್ದು, ಜೊತೆಗೊಬ್ಬ ಜವಾನ ತಮ್ಮು ಎನ್ನುವವನಿದ್ದಾನಂತೆ. ಇವಿಷ್ಟು ಜನರಿಗೂ ಟೆಂಡರ್ ನೋಡಲು ಅವಕಾಶವಿದೆಯಂತೆ.

ಇವತ್ತು ಬೆಳಗ್ಗೆ ಹತಾತ್ತನೆ, ಪಾಲುದಾರರು ತನ್ನನ್ನು ಹಾಗೂ ಸುಬ್ಬಯ್ಯನನ್ನು ಕರೆದು, ತಮ್ಮ